**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 324/2022** **CW**-2 **PW**-2

**ಸಾಕ್ಷಿಯನ್ನು ದಿಃ 03.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಗುರುಪ್ರಸಾದ |
| ತಂದೆಯ ಹೆಸರುಃ | ನಂಜಪ್ಪ |
| ವಯಸ್ಸುಃ | 44 ವರ್ಷ |
| ವೃತ್ತಿಃ | ಕಲಾವಿದ |
| ವಾಸ ಸ್ಥಳಃ | ಜಿನ್ನನಾಥಪುರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ -1 ನನ್ನ ಸಂಬಂಧಿ. ಮೃತರು ನನ್ನ ಅಕ್ಕನ ಗಂಡ.

3 ವರ್ಷದ ಹಿಂದೆ ನನ್ನ ಭಾವ ದ್ವಿಚಕ್ರ ವಾಹನದಲ್ಲಿ ಚನ್ನರಾಯಪಟ್ಟಣದಿಂದ ಶ್ರವಣಬೆಳಗೊಳಕ್ಕೆ ಹೋಗುತ್ತಿದ್ದಾಗ ಶ್ರವಣಬೆಳಗೊಳ ರಸ್ತೆಯಲ್ಲಿರುವ ಗುರುಭವನದ ಬಳಿ ಒಮಿನಿ ಕಾರು ಡಿಕ್ಕಿಯಾಗಿದೆ ಎಂದು ವಿಚಾರ ತಿಳಿದು, ಆಸ್ಪತ್ರೆಗೆ ಬಂದು ನೋಡಿದಾಗ ಸದರಿಯವರು ಮೃತಪಟ್ಟಿದ್ದರು. ನಾನು ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿ 4 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ಎಂದು ಗುರುತಿಲಾಯಿತು. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನಾನು ನ್ಯಾಯಾಲಯದಲ್ಲಿರುವ ಆರೋಪಿಯನ್ನು ಈ ಹಿಂದೆ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 06.02.2022 ರಂದು ನಾನು ನನ್ನ ಕೆಲಸದ ನಿಮಿತ್ತ ಹಾಗೂ ಮೃತರು ಬಳೆಗಳನ್ನು ತೆಗೆದುಕೊಳ್ಳುವ ನಿಮಿತ್ತ ಚನ್ನರಾಯಪಟ್ಟಣಕ್ಕೆ ಬಂದಿದ್ದೆವು ಎಂದರೆ ಸರಿ. ಮೃತರು ಸದರಿ ದ್ವಿಚಕ್ರ

ವಾಹನದಲ್ಲಿ ಮುಂದೆ ಹೋಗುತ್ತಿದ್ದು ನಾನು ಅವರ ಹಿಂದೆಯೇ ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸಂಜೆ 5.30 ರ ಸಮಯದಲ್ಲಿ ಶ್ರವಣಬೆಳಗೊಳದ ಕಡೆ ಕೆಎ – 04 ಎಮ್ ಬಿ 9401 ರ ಚಾಲಕ ತನ್ನ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಮುಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ತಕ್ಷಣ ಹೋಗಿ ಮೃತರನ್ನು ಉಪಚರಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಾನು ವಾಹನ ಮತ್ತು ಆರೋಪಿಯನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಒಮಿನಿ ವಾಹನದ ಚಾಲಕ ನ್ಯಾಯಾಲಯದಲ್ಲಿರುವ ಆರೋಪಿ ಎಂದರೆ ಸರಿಯಲ್ಲ. ಈ ಮೇಲಿನ ವಿಚಾರಗಳನ್ನು ಪೋಲೀಸರು ಮುಂದೆ ಹೇಳಿರುತ್ತೇನೆಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ದಿಃ 12.02.2022 ರ ಭಾಗವಾದ ಸಂಜೆ ಸುಮಾರು 5.30 ------------------------ ನಿಲ್ಲಿಸಿ ಓಡಿ ಹೋದನು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದರು ನೋಡಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸಿ ಎನ್ ಆರ್ ಪರವಾಗಿ ಕೆ ಎನ್ ಎಸ್ ರವರಿಂದ ಃ**

ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಅಪಘಾತವಾದ 20 ನಿಮಿಷಕ್ಕೆ ನಾನು ಸ್ಥಳಕ್ಕೆ ಹೋಗಿರುತ್ತೇನೆ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**